**ಸಾಕ್ಷಿಯನ್ನು ದಿಃ 24.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ಆಗಿ ಎರಡು ವರ್ಷ ಆಗಿರುತ್ತದೆ ದಿನಾಂಕ ನೆನಪಿಲ್ಲ. ಇದೇ ಮೊದಲ ಬಾರಿಗೆ ಅಪಘಾತ ಆಗಿರುತ್ತದೆ. ಅಪಘಾತ ಆದ ದಿನ ನಾನು ನಡೆದುಕೊಂಡು ಹೋಗುತ್ತಿದ್ದು ಹಿಂಬದಿಯಿಂದ ಬೈಕ್ ಸವಾರ ಬಂದು ಡಿಕ್ಕಿ ಪಡಿಸಿರುತ್ತಾನೆ. ಅಪಘಾತ ಪಡಿಸಿದ ಬೈಕ್ ಸಂಖ್ಯೆ ನೆನಪಿಲ್ಲ. ಅಪಘಾತ ಆದ ತಕ್ಷಣ ಮಂಡ್ಯದ ಜೆನರಲ್ ಆಸ್ಪತ್ರೆಗೆ ಹೋಗಿ ಅಲ್ಲಿ ಒಂದು ದಿನ ದಾಖಲಾಗಿದ್ದೆ. ಅಲ್ಲಿಂದ ಮನೆಗೆ ಬಂದಿರುತ್ತೇನೆ. ಮನೆಗೆ ಬಂದ ನಂತರ ಪೋಲೀಸರಿಗೆ ದೂರು ದಾಖಲಿಸಿರುವುದಿಲ್ಲ. ನನಗೆ ಅಪಘಾತ ಆಗದೇ ಇರುವ ಕಾರಣ ನಾನು ದೂರು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಹೆಚ್ಚು ನೋವು ಆದ ಕಾರಣ ಮೈಸೂರಿನ ಎನ್.ಹೆಚ್ ಆಸ್ಪತ್ರೆಗೆ ಬಂದು ದಾಖಲಾಗಿರುತ್ತೇನೆ. ಆನಂತರ ನನ್ನ ಪತ್ನಿ ದೂರು ದಾಖಲಿಸಿರುತ್ತಾರೆ. ನಿಪಿ. 2 ರಲ್ಲಿ ಇರುವ ಸಹಿ ನನ್ನದೇ. ಸದರಿ ದಾಖಲೆ ಪ್ರಕಾರ ನಾನೇ ಸ್ವತಃ ಠಾಣೆಗೆ ಹೋಗಿ ದಿಃ 08.06.2023 ರಂದು ದೂರು ದಾಖಲಿಸಿರುತ್ತೇನೆ ಎಂದರೆ ಸರಿ. ದಿಃ 08.06.2023 ರಂದು ನಾನು ಆಸ್ಪತ್ರೆಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ದೂರು ದಾಖಲಿಸಿ ನಂತರ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ. ಎರಡು ದಿನ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಮೊದಲಿನ ದಿನ ಮಂಡ್ಯ ಆಸ್ಪತ್ರೆಗೆ ಹೋಗಿದ್ದು, 2 ನೇ ದಿನ ಮನೆಯಲ್ಲಿದ್ದು, 3 ನೇ ದಿನ ದೂರು ದಾಖಲಿಸಿ ಎನ್.ಹೆಚ್ ಆಸ್ಪತ್ರೆಗೆ ಹೋಗಿರುತ್ತೇನೆ. ನಿಪಿ. 7 ನನಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ. 7 ರಲ್ಲಿ ನನಗೆ ನಾಲ್ಕು ವರ್ಷದ ಹಿಂದೆ ಆದ ಅಪಘಾತಕ್ಕೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ಅರ್ಜಿ ಹಾಗೂ ಪ್ರಮಾಣ ಪತ್ರದ ತದ್ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಯೇ ಗದ್ದೆ ಕೆಲಸ ಮಾಡುತ್ತಿದ್ದವರು ನನ್ನನ್ನು ಮಂಡ್ಯದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಚಂದ್ರು ಎನ್ನುವವರು ನನ್ನ ಆಪ್ತ ಸ್ನೇಹಿತ. ಅಪಘಾತ ಸ್ಥಳದಲ್ಲಿ ಸದರಿ ಚಂದ್ರು ಇರಲಿಲ್ಲ ಎಂದರೆ ಸಾಕ್ಷಿಯು ಅಪಘಾತವು ಚಂದ್ರು ರವರ ಗದ್ದೆಯ ಬಳಿ ಆಗಿರುತ್ತದೆ. ಸದರಿ ಚಂದ್ರು ನನಗೆ

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 5 ರಲ್ಲಿ ನನ್ನನ್ನು ಗಿರೀಶ್ ರವರು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದು ನಮೂದಾಗಿದೆ ಎಂದರೆ ಸರಿ. ನನಗೆ ಯಾವುದೇ ಅಪಘಾತ ಆಗದೇ ಇರುವ ಕಾರಣ ದಾಖಲೆಗಳನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವೈಧ್ಯಕೀಯ ದಾಖಲೆಯಲ್ಲಿ ಪ್ರಶ್ನಿತ ವಾಹನದ ಸಂಖ್ಯೆ ಬರೆದಿರುವುದಿಲ್ಲ ಎಂದರೆ ಸರಿ. ರಮೇಶ ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರು ನಮ್ಮ ಊರಿನಿಂದ 20 ಕಿ.ಮೀ ದೂರದ ಮದ್ದೂರಿನಲ್ಲಿದ್ದಾರೆ. ನಾನು 1 ನೇ ವಿರುದ್ಧ ಶಾಮಿಲಾಗಿ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 2 ಮತ್ತು ನಿಪಿ. 7 ಅನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಯಸ್ಸು ಮತ್ತು ಉದ್ಯೋಗದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸದೇ ಇರುವ ಕಾರಣ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ಕೆಲಸವನ್ನು ಬಿಟ್ಟು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸಾಕ್ಷಿಯು ಕೆಲಸಕ್ಕೆ ಹೋಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.